# **ಸೃಷ್ಟಿಕರ್ತನೆ ನೀ ನನ್ನ ರಕ್ಷಕನು**

ಸೃಷ್ಟಿಕರ್ತನೆ ನೀ ನನ್ನ ರಕ್ಷಕನು
ಸರ್ವಾಲೋಕಕ್ಕೇ ನೀನೇ ಪಾಲಕನು

ಸರ್ವವನ್ನು ನೀಡಿದೆ ನನಗಾಗಿ
ಸಲ್ಲಿಸುವೆ ನನ್ನನ್ನೇ ನಿನಗಾಗಿ
ದೇವನೆ ನಿನ್ನನ್ನೇ ನೋಡುವೆ
ಓ ಯೇಸುವೆ ನಿನ್ನ ನಾಮವ ಕೂಗುವೆ

ಸಮುದ್ರದ ಮುಂದೆ ನಡುಗಿನಿಂತೆ
ಸಮುದ್ರವ ಸೀಳಿ ನಡೆಸಿರುವೆ
ದಾಹದಿ ನಾನು ದಣಿದಿರಲು
ಸಿಹಿಯಾದ ನೀರನ್ನು ನೀಡಿರುವೆ

ಮರುಭೂಮಿಯಲ್ಲಿ ನಾ ಮೊರೆಯಿಡಲು
ಮನ್ನವ ನೀಡಿ ಪೋಷಿಸಿದೆ
ಹಗಲಿನಲ್ಲಿ ನನ್ನ ಆಧರಿಸಿದೆ
ಇರುಳಿನಲ್ಲಿ ನನ್ನ ಮುನ್ನಡೆಸಿದೆ